ಬೇಕಾದ ನೂಲು ಕೂಡ ಆಧುನಿಕ ಯಂತ್ರಗಳನ್ನು ಹೊಂದಿದ ಸ್ಪಿನ್ನಿಂಗ್ ಮಿಲ್ಲುಗಳಿಂದ ಬರಬೇಕು. ಮಿಲ್ಲುಗಳಲ್ಲಿ ಉತ್ಪಾದಿಸುವ ನೂಲು ಗಟ್ಟಿಯಾಗಿರುತ್ತದೆ ಹಾಗೂ ಯಂತ್ರದ ನೇಯ್ಗೆಯ ವೇಗವನ್ನು ತಡೆದುಕೊಳ್ಳುತ್ತದೆ. ಕೈಮಗ್ಗದಲ್ಲಿ ಬಟ್ಟೆ ನೇಯುವಾಗ ಉಪಯೋಗಿಸುವ ನೂಲು ಈ ಸ್ಪಿನ್ನಿಂಗ್ ಮಿಲ್ಲುಗಳಿಂದ ಬಂದುದೇ ಆಗಿರುತ್ತದೆ. ಅಂದರೆ, ಸ್ಥಳೀಯತೆಗೆ ಮೊದಲ ಧಕ್ಕೆ ಉಂಟುಮಾಡುತ್ತಿರುವುದು ಬಟ್ಟೆಗಿರಣಿಗಳಲ್ಲ – ಬದಲಿಗೆ ಸ್ಪಿನ್ನಿಂಗ್ ಮಿಲ್ಲುಗಳು. ಖಾದಿಯ ಮಾತಿಗೆ ಬಂದಾಗ, ನೂಲುವುದೂ ಸ್ಥಳೀಯವೇ ಹಾಗೂ ಅಲ್ಲಿಂದ ಬರುವ ನೂಲು ಕೇಂದ್ರೀಕೃತ ದೊಡ್ಡ ಗಿರಣಿಗೆ ಒಗ್ಗುವುದಿಲ್ಲವಾದ್ದರಿಂದ ನೇಯುವುದೂ ಸ್ಥಳೀಯವೇ ಆಗುತ್ತದೆ. ಹೀಗೆ ಗಾಂಧಿ ಮತ್ತು ಕುಮಾರಪ್ಪ ವಿಕೇಂದ್ರೀಕರಣ ಮತ್ತು ಸ್ಥಳೀಯತೆಗಿರುವ ಸವಾಲುಗಳ ಮೂಲವನ್ನು ಹುಡುಕಿ ತೆಗೆದಿದ್ದರು ಅನ್ನಿಸುತ್ತದೆ. ಈ ವಿಕೇಂದ್ರೀಕೃತ ವ್ಯವಸ್ಥೆಯ ಪ್ರಯೋಗವನ್ನು ಹೈದರಾಬಾದಿನ ಉಜ್ರಮ್ಮ ತಮ್ಮ 'ಮಲ್ಖಾ'ದ ಮೂಲಕ ಮಾಡುತ್ತಿದ್ದಾರೆ. ಹೆಗ್ಗೋಡಿನಲ್ಲಿ 'ಚರಕ' ಸಂಸ್ಥೆಯನ್ನು ಸ್ಥಾಪಿಸಿದ ರಂಗಕರ್ಮಿ ಪ್ರಸನ್ನ ಕೂಡಾ ಈ ಸೂತ್ರವನ್ನು ಹಿಡಿದು ಹೊರಟವರೇ.

ಸ್ಥಳೀಯತೆಯ ಬಗ್ಗೆ ತಲೆಕೆಡಿಸಿಕೊಳ್ಳದೆಯೇ ನೈತಿಕ ವ್ಯಾಪಾರ ವ್ಯವಸ್ಥೆಯನ್ನು ಪ್ರತಿಪಾದಿಸುವ ಬೇರೆ ಯಾವುದಾದರೂ ಮಾದರಿಗಳಿವೆಯೇ ಎನ್ನುವುದನ್ನು ಪರಿಶೀಲಿಸಿದಾಗ ನನಗೆ ಅಮೆರಿಕದ ಪ್ಯಾಟಗೋನಿಯಾದ ವ್ಯಾಪಾರ ವ್ಯವಸ್ಥೆಯನ್ನು ಚರ್ಚಿಸುವುದು ಮುಖ್ಯವೆನ್ನಿಸುತ್ತದೆ. ಪ್ಯಾಟಗೋನಿಯಾ ಸ್ಥಳೀಯತೆಯನ್ನು ಪ್ರತಿಪಾದಿಸುವುದಿಲ್ಲ. ಅಷ್ಟೇ ಅಲ್ಲ. ಪ್ಯಾಟಗೋನಿಯಾ ಲಾಭವನ್ನಾರ್ಜಿಸುವ ಬಂಡವಾಳಮೂಲದ ಕಂಪನಿಯಾಗಿದ್ದರೂ, ನಿಜಕ್ಕೂ ಆಸಕ್ತಿಯನ್ನು ಹುಟ್ಟಿಸುವ ಸಂಸ್ಥೆ. ಪರಿಸರಕ್ಕೆ ತನ್ನನ್ನು ಮುಡಿಪಾಗಿಟ್ಟು ಗ್ರಾಹಕ ಸಂಸ್ಕೃತಿಯ ವಿರುದ್ಧ ಪ್ರಚಾರ ಮಾಡುತ್ತಲೇ ತನ್ನ ವ್ಯಾಪಾರವನ್ನು ಪ್ಯಾಟಗೋನಿಯಾ ಕೈಗೊಳ್ಳುತ್ತದೆ. ಪ್ಯಾಟಗೋನಿಯಾ ತಯಾರಿಸುವುದು ಮೂಲಭೂತವಾಗಿ ಪರ್ವತಾರೋಹಣ ಮತ್ತು ಇತರ ಸಾಹಸ ಕ್ರೀಡೆಗಳಿಗೆ ಬೇಕಾದ ಉಡುಪುಗಳನ್ನು. ಪರ್ವತಗಳನ್ನು ಜಾಗರೂಕವಾಗಿ ನೋಡಿಕೊಳ್ಳದಿದ್ದರೆ, ಆರೋಹಣ ಮಾಡಲು ಏನೂ ಇರುವುದಿಲ್ಲ ಎನ್ನುವ ನಂಬಿಕೆಯೊಂದಿಗೆ ಈವಾನ್ ಶ್ಯುನಾರ್ಡ್ ಈ ಸಂಸ್ಥೆಯನ್ನು ಸ್ಥಾಪಿಸಿದರು. 'ಇರುವುದರಲ್ಲಿ ಖುಷಿಯಾಗಿರಿ, ಮತ್ತೆ ಮತ್ತೆ ಉಪಯೋಗಿಸಿ, ರಿಪೇರಿ ಮಾಡಿ ಬಟ್ಟೆಗಳನ್ನು ತೊಡಿ, ಅವಶ್ಯವಿಲ್ಲದಿದ್ದಲ್ಲಿ ಏನನ್ನೂ ಕೊಳ್ಳಬೇಡಿ' ಎನ್ನುತ್ತಲೇ – ಪ್ಯಾಟಗೋನಿಯಾ ನಿರಂತರವಾಗಿ ತನ್ನ ಉತ್ಪನ್ನಗಳು ಎಷ್ಟರ ಮಟ್ಟಿಗೆ ಪರಿಸರನಾಶ ಮಾಡುತ್ತಿದೆ ಎನ್ನುವುದನ್ನು ಪರಿಶೀಲಿಸುತ್ತಾ ತುಟ್ಟಿಯಾದರೂ, ನಷ್ಟವಾಗಬಹುದಾದರೂ ಪರಿಸರಸ್ನೇಹಿ ವಸ್ತುಗಳನ್ನು ತಯಾರಿಸುತ್ತಿದೆ. ಜೊತೆಗೆ ಲಾಭಾಂಶದ ಶೇ. 10 ಅಥವಾ ಮಾರಾಟದ ಶೇ. 1ರ ಪರಿಮಾಣದಲ್ಲಿ ಪರಿಸರದ ಕಾರ್ಯಕ್ರಮಗಳಿಗೆ ದೇಣಿಗೆಯನ್ನು ಕೊಡುತ್ತಿದೆ. ಇಲ್ಲಿ ಸ್ಥಳೀಯತೆಯ ಮಾತು ನಿಸ್ಸಂಶಯವಾಗಿ ಕಾಣುವುದಿಲ್ಲ. ಆದರೆ ಅವರು ಲೆಕ್ಕಕಟ್ಟುವ ಫುಟ್‌ಪ್ರಿಂಟ್ ಕ್ರಾನಿಕಲ್ಸ್‌ನಲ್ಲಿ ಮಾಲನ್ನು ಸಾಗಿಸುವುದರಲ್ಲಿರುವ ಪರಿಸರ ಮಾಲಿನ್ಯವನ್ನು ಅಳೆಯುವುದರಿಂದ ಅದೂ ಸ್ಥಳೀಯವಾಗುವತ್ತಲೇ ಸಾಗುವ ಸಾಧ್ಯತೆಗಳಿವೆ.

ಕಡೆಗೂ ನಮಗೆ ತಿಳಿಯುವುದು ಇಷ್ಟು. ತಂತ್ರಜ್ಞಾನ, ಬಹುತೇಕ ಪರಿಸರ ವಿರೋಧಿಯಾಗಿರುತ್ತದೆ. ಕೇಂದ್ರೀಕೃತ ಉತ್ಪಾದನೆಯಿಂದಲೂ ಪರಿಸರಕ್ಕೆ ಧಕ್ಕೆ ಉಂಟಾಗುತ್ತದೆ. ಎರಡಕ್ಕೂ ಸ್ಥಳೀಯತೆ ಮತ್ತು ವಿಕೇಂದ್ರೀಕರಣವೇ ಮದ್ದು. ವಿಕೇಂದ್ರೀಕೃತ ಉದ್ದಿಮೆಯಲ್ಲಿ ಬೆಳವಣಿಗೆಗೆ ಮಿತಿಗಳಿರುತ್ತವೆ. ಲಾಭಕ್ಕೂ ಮಿತಿಗಳಿರುತ್ತವೆ. ಅಸಮಾನತೆಗೂ ಮಿತಿಗಳಿರುತ್ತವೆ. ವಾರಕ್ಕೆ ಹದಿನೈದು ತಾಸುಗಳ ಕೆಲಸ, ಮತ್ತು ಮಿಕ್ಕ ಸಮಯದಲ್ಲಿ ಸಂಗೀತ–ಸಾಹಿತ್ಯ–ಕಲೆಯ ಮೇಲೆ ಕಳೆಯಬಹುದಾದ ಸಂತೃಪ್ತ ಜೀವನ ಸಿಗಬಹುದಾದರೆ – ಬಹುಮಹಡಿಯ ಮನೆ, ದೊಡ್ಡ ಕಾರು, ಅಪಾರ ಶ್ರೀಮಂತಿಕೆಯಿಂದ ಅದೇ ಸುಖ ಸಿಗುವುದೇ... ಅಥವಾ ಅದು ಕೇವಲ ಲೋಲುಪತೆಯ ಭ್ರಮೆಯೇ...

ಸುಮನಸ್, ಶೂಮೇಕರ್, ಇಳಾ ಭಟ್, ಈವಾನ್ ಶ್ಯುನಾರ್ಡ್, ಜೇಮ್ಸ್ ಸುಜ಼್‌ಮನ್ – ಇವರೆಲ್ಲರೂ ಸಂತೃಪ್ತಿ ಮತ್ತು ಸುಖದ ಮತ್ತೊಂದು ಪರಿಭಾಷೆಯನ್ನೇ ಕೊಟ್ಟಿದ್ದಾರೆ.

●